12-0-154

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲಿರುವ ಸೂಚನೆ**

ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳು ಹಾಗೂ ಬಿಡಾಡಿ ದನಗಳು, ಮಕ್ಕಳು ಹಾಗೂ ನಾಗರೀಕರ ಮೇಲೆ ದಾಳಿ ಮಾಡುತ್ತಿರುವ ಬಗ್ಗೆ.

**ಉತ್ತರ**

ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳು ಮಕ್ಕಳು ಹಾಗೂ ನಾಗರೀಕರ ಮೇಲೆ ದಾಳಿ ಮಾಡುತ್ತಿರುವುದನ್ನು ಕಡಿತಗೊಳಿಸಲು ರಾಜ್ಯದಲ್ಲಿ ಬೀದಿ ನಾಯಿಗಳ ಸಮೀಕ್ಷೆ ಕೈಗೊಂಡು, Animal Welfare Board of India ರವರಿಂದ ಮಾನ್ಯತೆ ಪಡೆದ ಹಾಗೂ ಪ್ರಾಣಿ ಜನನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸೂಕ್ತ ತರಬೇತಿ ಮತ್ತು ಅನುಭವ ಇರುವ ಸಂಘ ಸಂಸ್ಥೆಗಳ ಮೂಲಕ ಸಂಸ್ಥೆ ವತಿಯಿಂದ ಪ್ರಾಣಿ ಜನನ ಸಂತಾನ ಹರಣ ಚಿಕಿತ್ಸೆ Animal Birth Control ಮತ್ತು Anti Rabies Vaccination (ARV) ರೋಗ ನಿರೋಧಕ ಲಸಿಕೆಗಳನ್ನು ಹಾಕಿಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಕೋಳಿ ಹಾಗೂ ಮಾಂಸ ಮಾರಾಟ ಮಾಡುವ ಪ್ರದೇಶಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬೀದಿನಾಯಿಗಳು ದಾಳಿ ಮಾಡುವುದನ್ನು ತಡೆಗಟ್ಟಲು ಬೀದಿಬದಿ ಪ್ರಾಣಿಗಳಿಗೆ ಆಹಾರ ನೀಡುವುದಕ್ಕೆ ಹೊರಡಿಸಿರುವ ಮಾರ್ಗಸೂಚಿಗಳು, ಹಾಗೂ Standard Operating Procedure for feeder Harassment ಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಮಾರ್ಗಸೂಚಿಗಳ ರೀತ್ಯ ಅಗತ್ಯ ಕ್ರಮವಹಿಸುವಂತೆ ಸೂಚಿಸಲಾಗಿರುತ್ತದೆ **ಅನುಬಂಧ-1ರಲ್ಲಿ** ನೀಡಲಾಗಿದೆ.

ಬೀದಿಬದಿ ಪ್ರಾಣಿಗಳಿಗೆ ಸುರಕ್ಷಿತ ವಿಧಾನದಲ್ಲಿ ಆಹಾರ ನೀಡುವುದರ ಕುರಿತು ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ ದೃಢೀಕರಿಸಿ ನೀಡಿರುವ ಪೋಸ್ಟರ್ ಮತ್ತು ಬ್ಯಾನರ್ ಗಳನ್ನು ಹೆಚ್ಚಿನ ಜನ ದಟ್ಟಣೆ ಇರುವ ಸ್ಥಳಗಳಾದ ಬಸ್ಸು ನಿಲ್ದಾಣ, ರೈಲ್ವೆ ನಿಲ್ದಾಣ, ಮಾರುಕಟ್ಟೆ, ಚಿತ್ರ ಮಂದಿರ ಮತ್ತು ಇತರೆ ಸ್ಥಳಗಳಲ್ಲಿ ಪ್ರಚುರಪಡಿಸುವ ಮೂಲಕ ಬೀದಿಬದಿ ಪ್ರಾಣಿಗಳಿಗೆ ಆಹಾರ ನೀಡುವುದರ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ **ಅನುಬಂಧ-2ರಲ್ಲಿ** ನೀಡಲಾಗಿದೆ.

**ಸಂಖ್ಯೆ: ನಅಇ 280 ಜಿಇಎಲ್ 2024 (ಇ)**

**(ರಹೀಂ ಖಾನ್)**
**ಪೌರಾಡಳಿತ ಮತ್ತು ಹಜ್ ಸಚಿವರು**

**ನಿರ್ದೇಶಕರ ಕಛೇರಿ**
ಪೌರಾಡಳಿತ ನಿರ್ದೇಶನಾಲಯ

**ಕರ್ನಾಟಕ ಸರ್ಕಾರ**

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

23952/DMA/272/SWM/2017-18

ದಿನಾಂಕ:27.12.2023

ರವರಿಗೆ,
ನಿರ್ದೇಶಕರು
ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ
ಪಶುಪಾಲನಾ ಭವನದ ಹಿಂಭಾಗ, ಬಳ್ಳಾರಿ ರಸ್ತೆ
ಬೆಂಗಳೂರು.

ಮಾನ್ಯರೇ,

ವಿಷಯ: ಬೀದಿ ಬದಿಯ ಪ್ರಾಣಿಗಳಿಗೆ ಆಹಾರ ನೀಡುವಿಕೆ ಮತ್ತು ಸಂಘರ್ಷ ಪರಿಹಾರಕ್ಕೆ ಸಂಬಂಧಿಸಿದಂತೆ ಪ್ರಚುರ ಪಡಿಸಲು ಛಾಯ ಚಿತ್ರಗಳ ಮಾದರಿ ಪ್ರತಿಗಳನ್ನು ಪ್ರಮಾಣೀಕರಿಸುವ ಕುರಿತು.

ಉಲ್ಲೇಖ:
1. ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಹಾಗೂ ಅಧ್ಯಕ್ಷರು, ಕಾರ್ಯಕಾರಿ ಸಮಿತಿ, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ ರವರ ಪತ್ರ ಸಂಖ್ಯೆ: Chairman/kawb/2022-23/260, ದಿನಾಂಕ: 31.12.2022.
2. Writ Petition No. 10674/2022(PIL) High Court of Karnataka, Bangalore-Sri Ramesh Naik.L, Tumkur/Vs/State of Karnataka by Chief Secretary, Bengaluru and others. Daily orders dated: 16.11.2023.

*********

ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಹಾಗೂ ಅಧ್ಯಕ್ಷರು, ಕಾರ್ಯಕಾರಿ ಸಮಿತಿ, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ, ಬೆಂಗಳೂರು ರವರು ದಿನಾಂಕ: 31.12.2022 ರಂದು ಬೀದಿಬದಿ ಪ್ರಾಣಿಗಳಿಗೆ ಆಹಾರ ನೀಡುವುದಕ್ಕೆ ಸಂಬಂಧಿಸಿದಂತೆ Standard Operating Procedure for feeder Harassment ಗಳಿಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಸದರಿ ವಿಷಯದ ಕುರಿತು ಸಾಮಾಜಿಕ ತಾಣಗಳ ಮೂಲಕ ಸಾರ್ವಜನಿಕರಲ್ಲಿ ಹೆಚ್ಚಿನ ರೀತಿಯಲ್ಲಿ ಅರಿವು ಮೂಡಿಸಲು pamphlets, placards, billboards ಗಳ ಮೂಲಕ ಅತೀ ಹೆಚ್ಚು ಜನಸಂದಣಿ ಹೊಂದಿರುವ ಪ್ರದೇಶಗಳಾದ ತರಕಾರಿ ಮಾರುಕಟ್ಟೆಗಳು, ಸ್ಥಳೀಯ ಸಗಟು ಮಾರುಕಟ್ಟೆಗಳು, ಕೈಗಾರಿಕಾ ಪ್ರದೇಶಗಳು, ಬೀದಿ ವ್ಯಾಪಾರಿಗಳು, ಮಾಂಸ ಮಾರಾಟಗಾರರು, ರೈಲು ನಿಲ್ದಾಣಗಳಲ್ಲಿ ಇತ್ಯಾದಿ ಸ್ಥಳಗಳಲ್ಲಿ ಪ್ರಚಾರಪಡಿಸಲು ಮಾದರಿ ಪ್ರತಿಗಳನ್ನು ಪ್ರಮಾಣೀಕರಿಸಿ ನೀಡಲು ಕೋರಿದೆ.(2 ಸಂಖ್ಯೆಯ ಮಾದರಿ ಪ್ರತಿಗಳನ್ನು ಲಗತ್ತಿಸಿದೆ)

ತಮ್ಮ ವಿಶ್ವಾಸಿ,

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು:
1. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಹಾಗೂ ಅಧ್ಯಕ್ಷರು, ಕಾರ್ಯಕಾರಿ ಸಮಿತಿ, ಕರ್ನಾಟಕ ಪ್ರಾಣಿ ಕಲ್ಯಾಣ ಮಂಡಳಿ

GOVERNMENT OF KARNATAKA
ನಗರಾಭಿವೃದ್ಧಿ ಇಲಾಖೆ
ಪೌರಾಡಳಿತ ನಿರ್ದೇಶನಾಲಯ


# ಬೀದಿ ನಾಯಿಗಳಿಗೆ ರಸ್ತೆ ಬದಿಯಲ್ಲಿ ಆಹಾರ ನೀಡುವ ಪದ್ಧತಿ






- ನಾಯಿಗಳಿಗೆ ಆಹಾರ ನೀಡುವಾಗ ಸಾರ್ವಜನಿಕ ಸ್ಥಳಗಳು, ಜನರು ಹೆಚ್ಚಾಗಿ ಭೇಟಿ ನೀಡುವ ಸ್ಥಳಗಳು ಮತ್ತು ಜನಸಂದಣಿಯ ಸ್ಥಳಗಳನ್ನು ತಪ್ಪಿಸಬೇಕು.
- ಸಾರ್ವಜನಿಕ ದಟ್ಟಣೆ ಇಲ್ಲದ ಸಮಯದಲ್ಲಿ ಆಹಾರ ಒದಗಿಸುವುದು.
- ನಾಯಿಗಳಿಗೆ ಆಹಾರವನ್ನು ದಿನಕ್ಕೆ ಎರಡು ಬಾರಿ ಮಾತ್ರ ನೀಡಬೇಕು.
- ಆಹಾರ ಒದಗಿಸುವಾಗ ಬಳಸುವ ಪಾತ್ರೆ, ಬಟ್ಟಲುಗಳು, ಸ್ವಚ್ಛವಾಗಿದ್ದು ಪುನರ್ಬಳಕೆಯಾಗುವಂತಹ ವಸ್ತುಗಳಿಂದ ಮಾಡಲ್ಪಟ್ಟಿರಬೇಕು ಹಾಗೂ ಆಹಾರ ನೀಡಿದ ನಂತರ ಆ ಸ್ಥಳವು ಕಸಮುಕ್ತವಾಗಿರುವಂತೆ ನೋಡಿಕೊಳ್ಳಬೇಕು.

- ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡದ ಸ್ಥಳಗಳಲ್ಲಿ ಬೀದಿ ನಾಯಿಗಳಿಗೆ ಆಹಾರವನ್ನು ನೀಡಬೇಕು. ಈ ಕ್ರಮವು ಸಾರ್ವಜನಿಕರಿಗೆ ಮತ್ತು ನಾಯಿಗಳಿಗೆ ಅನಾನುಕೂಲತೆಗಳನ್ನು ತಪ್ಪಿಸುತ್ತದೆ.
- ನಾಯಿಗಳು ನಿರ್ದಿಷ್ಟ ಪ್ರದೇಶಕ್ಕನುಗುಣವಾದ ವರ್ತನೆಯನ್ನು ಹೊಂದಿವೆ, (Territorial Behaviour) ಆದ್ದರಿಂದ ಆ ಪ್ರದೇಶದ ಮೇಲೆ ಸ್ವಾಮ್ಯ ಸಾಧಿಸಲು ಅವು ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರದರ್ಶಿಸುತ್ತವೆ. ಆದುದರಿಂದ ಅವುಗಳು ಗುಂಪುಗೂಡದಂತೆ ಎಚ್ಚರ ವಹಿಸಿ ಆಹಾರ ನೀಡಬೇಕು.
- ಜನರು ಸಾಮಾನ್ಯವಾಗಿ ಓಡಾಡದ/ಜನ ವಿರಳವಾಗಿ ಸಂಚರಿಸುವ ಸರ್ವಿಸ್ ಲೈನ್ ಗಳನ್ನು ನಾಯಿಗಳಿಗೆ ಆಹಾರ ನೀಡಲು ಬಳಸಬಹುದಾಗಿದೆ.






GOVERNMENT OF KARNATAKA




# ನಗರಾಭಿವೃದ್ಧಿ ಇಲಾಖೆ

## ಪೌರಾಡಳಿತ ನಿರ್ದೇಶನಾಲಯ

## ಬೀದಿ ನಾಯಿಗಳಿಗೆ ರಸ್ತೆ ಬದಿಯಲ್ಲಿ ಆಹಾರ ನೀಡುವ ಪದ್ಧತಿ





- ನಾಯಿಗಳಿಗೆ ಆಹಾರ ನೀಡುವಾಗ ಸಾರ್ವಜನಿಕ ಸ್ಥಳಗಳು, ಜನರು ಹೆಚ್ಚಾಗಿ ಭೇಟಿ ನೀಡುವ ಸ್ಥಳಗಳು ಮತ್ತು ಜನಸಂದಣಿಯ ಸ್ಥಳಗಳನ್ನು ತಪ್ಪಿಸಬೇಕು.
- ಸಾರ್ವಜನಿಕ ದಟ್ಟಣೆ ಇಲ್ಲದ ಸಮಯದಲ್ಲಿ ಆಹಾರ ಒದಗಿಸುವುದು.
- ನಾಯಿಗಳಿಗೆ ಆಹಾರವನ್ನು ದಿನಕ್ಕೆ ಎರಡು ಬಾರಿ ಮಾತ್ರ ನೀಡಬೇಕು.
- ಆಹಾರ ಒದಗಿಸುವಾಗ ಬಳಸುವ ಪಾತ್ರೆ, ಬಟ್ಟಲುಗಳು, ಸ್ವಚ್ಛವಾಗಿದ್ದು ಪುನರ್ಬಳಕೆಯಾಗುವಂತಹ ವಸ್ತುಗಳಿಂದ ಮಾಡಲ್ಪಟ್ಟಿರಬೇಕು ಹಾಗೂ ಆಹಾರ ನೀಡಿದ ನಂತರ ಆ ಸ್ಥಳವು ಕಸಮುಕ್ತವಾಗಿರುವಂತೆ ನೋಡಿಕೊಳ್ಳಬೇಕು.
- ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡದ ಸ್ಥಳಗಳಲ್ಲಿ ಬೀದಿ ನಾಯಿಗಳಿಗೆ ಆಹಾರವನ್ನು ನೀಡಬೇಕು. ಈ ಕ್ರಮವು ಸಾರ್ವನಿಕರಿಗೆ ಮತ್ತು ನಾಯಿಗಳಿಗೆ ಅನಾನುಕೂಲತೆಗಳನ್ನು ತಪ್ಪಿಸುತ್ತದೆ.
- ನಾಯಿಗಳು ನಿರ್ದಿಷ್ಟ ಪ್ರದೇಶಕ್ಕನುಗುಣವಾದ ವರ್ತನೆಯನ್ನು ಹೊಂದಿವೆ, (Territorial Behaviour) ಆದ್ದರಿಂದ ಆ ಪ್ರದೇಶದ ಮೇಲೆ ಸ್ವಾಮ್ಯ ಸಾಧಿಸಲು ಅವು ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರದರ್ಶಿಸುತ್ತವೆ. ಆದುದರಿಂದ ಅವುಗಳು ಗುಂಪುಗೂಡದಂತೆ ಎಚ್ಚರ ವಹಿಸಿ ಆಹಾರ ನೀಡಬೇಕು
- ಜನರು ಸಾಮಾನ್ಯವಾಗಿ ಓಡಾಡದ/ಜನ ವಿರಳವಾಗಿ ಸಂಚರಿಸುವ ಸರ್ವಿಸ್ ಲೈನ್ ಗಳನ್ನು ನಾಯಿಗಳಿಗೆ ಆಹಾರ ನೀಡಲು ಬಳಸಬಹುದಾಗಿದೆ.

